ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	606 (766)
ಮಾನ್ಯ ಸದಸ್ಯರ ಹೆಸರು	:	ಶ್ರೀ ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ವಿಷಯ	:	'ಜೀವನ ಚೈತ್ರ ಯಾತ್ರೆ' ಕಾರ್ಯಕ್ರಮದ ಜಾರಿ ಬಗ್ಗೆ.
ಉತ್ತರಿಸುವ ಸಚಿವರು	:	ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.
ಉತ್ತರಿಸುವ ದಿನಾಂಕ:	:	25-09-2020.

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	2020-21ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿರುವಂತೆ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಹಾಗೂ ರೈಲ್ವೆ ಇಲಾಖೆ (IRCTC) ಸಹಯೋಗದೊಂದಿಗೆ ರಾಜ್ಯದಲ್ಲಿರುವ 60 ವರ್ಷ ಮೀರಿದ ಬಡತನ ರೇಖೆಗಿಂತ ಕೆಳಗಿರುವ ಆಯ್ದ ಫಲಾನುಭವಿಗಳಿಗೆ ಉಚಿತವಾಗಿ ರಾಜ್ಯ ಮತ್ತು ದೇಶದ ಪ್ರಸಿದ್ಧ ತೀರ್ಥ ಕ್ಷೇತ್ರಗಳನ್ನು ದರ್ಶಿಸಲು "ಜೀವನ ಚೈತ್ರ ಯಾತ್ರೆ"ಯನ್ನು ಜಾರಿಗೊಳಿಸಲಾಗಿದೆಯೇ?	"ಜೀವನ ಚೈತ್ರ ಯಾತ್ರೆ" ಯ ಕಾರ್ಯಕ್ರಮದ ಅನುಷ್ಠಾನ ಸಂಬಂಧವಾಗಿ ಐ.ಆರ್.ಸಿ.ಟಿ.ಸಿ. ಸಲ್ಲಿಸಿರುವ ಪ್ರಸ್ತಾವನೆ ಪರಿಶೀಲನಾ ಹಂತದಲ್ಲಿರುತ್ತದೆ.
ಆ)	ಜಾರಿಗೊಳಿಸಿದ್ದಲ್ಲಿ, ಎಷ್ಟು ಜನ ಫಲಾನುಭವಿಗಳು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ; (ಜಿಲ್ಲಾವಾರು ಮಾಹಿತಿ ನೀಡುವುದು)	"ಜೀವನ ಚೈತ್ರ ಯಾತ್ರೆ" ಯ ಕಾರ್ಯಕ್ರಮದ ಪ್ರಸ್ತಾವನೆಯು ಪರಿಶೀಲನಾ ಹಂತ ದಲ್ಲಿರುವುದರಿಂದ, ಮುಂದಿನ ದಿನಗಳಲ್ಲಿ ಈ ಕುರಿತು ಫಲಾನುಭವಿಗಳ ಆಯ್ಕೆಯನ್ನು ಕೈಗೊಳ್ಳಲಾಗುವುದು.
ಇ)	ಜಾರಿಗೊಳಿಸದಿದ್ದಲ್ಲಿ ಕಾರಣಗಳೇನು ಮತ್ತು ಯಾವಾಗ ಜಾರಿಗೊಳಿಸಲಾಗುವುದು?	ವಿಶ್ವದಾದ್ಯಂತ ಹರಡಿಸಿರುವ ಕೋವಿಡ್-19 ಸಾಂಕ್ರಮಿಕ ಸಮಸ್ಯೆ ಬಗೆಹರಿದ ನಂತರ ಜಾರಿಗೊಳಿಸಲಾಗುವುದು.

ಸಂಖ್ಯೆ: ಟಿಓಆರ್ 192 ಟಿಡಿವಿ 2020

(ಸಿ.ಟಿ.ರವಿ)
ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಹಾಗೂ
ಯುವಸಬಲೀಕರಣ ಮತ್ತು ಕ್ರೀಡಾ ಸಚಿವರು.